# ಸಂಪಾದಕೀಯ

# ಮೌಲ್ಯ ಚಿಂತನೆ

## ಎಲ್ಲ ಆತ್ಮನಿಗಾಗಿ

***ಸಾಂಖ್ಯ***ದರ್ಶನದ ಒಂದು ಮುಖ್ಯ ಸಿದ್ಧಾಂತದ ಪ್ರಕಾರ ಪ್ರತಿಯೊಂದು ಸಂಘಾತವೂ (ಅನೇಕ ಘಟಕಗಳ ಸಂಯೋಜನೆ) ಇತರರಿಗಾಗಿ ಇದೆ—**ಸಂಘಾತಃ ಪರಾರ್ಥತ್ವಾತ್**. ಮನೆ ಒಂದು ಸಂಘಾತ, ಅದು ಅನೇಕ ವಸ್ತುಗಳ ಕೂಡುವಿಕೆಯಿಂದ ಆಗಿದೆ. ಆ ಮನೆ ತನಗಾಗಿ ಆಗಿಲ್ಲ, ಅದು ಮನುಷ್ಯರು ವಾಸಿಸುವುದಕ್ಕಾಗಿ ಆಗಿದೆ. ಅಡುಗೆ ಒಂದು ಸಂಘಾತ. ಅದು ಮನುಷ್ಯರು ಉಣ್ಣುವುದಕ್ಕಾಗಿ ಆಗಿದೆ. ಹೀಗೆ ಈ ಪ್ರಪಂಚದಲ್ಲಿ ಎಲ್ಲ ಸಂಘಾತಗಳೂ ಇತರರಿಗಾಗಿ ಇವೆ. '**ಪ್ರಕೃತಿ ಆತ್ಮನಿಗಾಗಿ ಇದೆಯೇ ಹೊರತು, ಆತ್ಮ ಪ್ರಕೃತಿಗಾಗಿ ಅಲ್ಲ**' ಎಂಬ ಮಾತಿನಲ್ಲಿ ಸ್ವಾಮಿ ವಿವೇಕಾನಂದರೂ ಇದೇ ಅಭಿಪ್ರಾಯವನ್ನೇ ವ್ಯಕ್ತಪಡಿಸಿರುವರು. ಇಡೀ ಪ್ರಪಂಚವೇ ಒಂದು ಸಂಘಾತ. ಅದರಲ್ಲಿರುವ ಎಲ್ಲ ಸಂಘಾತ ವಸ್ತುಗಳೂ ಮೌಲ್ಯವನ್ನು ಪಡೆಯುವುದು ಚೇತನಾತ್ಮಕ ಜೀವಿಗಳು ಅವನ್ನು ಉಪಯೋಗಿಸಿದಾಗ.

> ಮೌಲ್ಯಗಳು ವಿಚಾರರಹಿತವಾಗಿದ್ದರೆ ಅಂಧ, ಭಾವಹೀನವಾಗಿದ್ದರೆ ದುರ್ಬಲ, ಕ್ರಿಯಾಹೀನವಾಗಿದ್ದರೆ ಶೂನ್ಯ.
>
> —ರಿಚರ್ಡ್ ಎಲ್. ಮೊರಿಲ್

## ಮೌಲ್ಯ ಎಂದರೇನು?

ಯಾವುದು ಜೀವಿಗಳಿಗೆ ಪ್ರಯೋಜನವನ್ನು ಉಂಟುಮಾಡುವುದೋ ಅದು ಮೌಲ್ಯ. ಯಾವ ವಸ್ತುವನ್ನು ನಾವು ಉಂಡರೆ ನಮಗೆ ಶಕ್ತಿ ಪೌಷ್ಟಿಕತೆ ಉಂಟಾಗುವುದೊ ಅದನ್ನು ನಾವು ಆಹಾರ ಎಂದು ಕರೆಯುತ್ತೇವೆ, ಮತ್ತು ಆ ವಸ್ತುವಿಗೆ ಆಹಾರ ಮೌಲ್ಯವಿದೆ ಎಂದು ಹೇಳುತ್ತೇವೆ. ಯಾವುದು ನಮ್ಮ ರೋಗವನ್ನು ಗುಣಪಡಿಸುವುದೊ ಅದು ಔಷಧಿ ಮೌಲ್ಯ. ಯಾವುದು ನಮ್ಮ ನೈತಿಕ ಉನ್ನತಿಗೆ ಸಹಾಯಕ ವಾಗುವುದೊ ಅದು ನೈತಿಕ ಮೌಲ್ಯ. ಹಾಗೆಯೇ ಯಾವ ಸಾಧನೆಗಳು ನಮ್ಮ ಆಧ್ಯಾತ್ಮಿಕ ಉನ್ನತಿಗೆ ಸಹಾಯಕವಾಗುವುವೋ ಅವೇ ಆಧ್ಯಾತ್ಮಿಕ ಮೌಲ್ಯಗಳು. ಹೀಗೆ ಮೌಲ್ಯಗಳಲ್ಲಿ ತಾರತಮ್ಯವುಂಟು. ಸಂಸ್ಕೃತದಲ್ಲಿ ಈ ಮೌಲ್ಯವನ್ನು ಪುರುಷಾರ್ಥ ಎಂದು ಕರೆಯುತ್ತಾರೆ —ಅಂದರೆ **ಪುರುಷೈಃ ಅರ್ಥ್ಯಂತೇ ಇತಿ ಪುರುಷಾರ್ಥಾಃ**—ಪುರುಷರು ಬಯಸುವುದರಿಂದ ಪುರುಷಾರ್ಥಗಳು. ಅವು ಅವರ ಆವಶ್ಯಕತೆಗಳನ್ನು ಪೂರೈಸುವುದರಿಂದ ಪುರುಷಾರ್ಥಗಳು.

ಉಪಯೋಗಿಸುವ ಎಲ್ಲ ವಸ್ತುಗಳೂ ವ್ಯಕ್ತಿಗೆ ಪ್ರಯೋಜನವನ್ನುಂಟುಮಾಡದೆ ಇರಬಹುದು. ನಾವುಣ್ಣುವ ಅನೇಕ ಆಹಾರ ಪದಾರ್ಥಗಳು ನಮಗೆ ಹಾನಿಯನ್ನುಂಟುಮಾಡುತ್ತವೆ. ಹೀಗೆಯೇ ನೈತಿಕವಾಗಿ, ಆಧ್ಯಾತ್ಮಿಕವಾಗಿ ಹಾನಿಯನ್ನುಂಟುಮಾಡುವ ಅನೇಕ ವಸ್ತುಗಳನ್ನು ಮತ್ತು ವಿಷಯಗಳನ್ನು ನಾವು ಬಳಸುತ್ತೇವೆ. ಆದ್ದರಿಂದ ವ್ಯಕ್ತಿಯು ಬಳಸಿದ ಮಾತ್ರಕ್ಕೆ ಯಾವುದನ್ನೇ ಆಗಲಿ ಮೌಲ್ಯವುಳ್ಳದ್ದೆಂದು ಹೇಳಲಾಗುವುದಿಲ್ಲ. ಹಾಗೆಯೇ ವ್ಯಕ್ತಿಗೆ ಹಾನಿಯನ್ನುಂಟು ಮಾಡದೆ, ಅವನಿಗೆ ಹಿತವನ್ನುಂಟು ಮಾಡುವ ಎಲ್ಲವೂ ಮೌಲ್ಯವಂತವೆಂದು ಹೇಳಲಾಗುವುದಿಲ್ಲ. ಉತ್ತಮ ಆಹಾರವಾದರೂ ಮೋಸದಿಂದ ಪಡೆದಿದ್ದರೆ ಅದು ಮೌಲ್ಯಗಳ ಗುಂಪಿಗೆ ಸೇರುವುದಿಲ್ಲ. ಮೌಲ್ಯಮಾಪನದಲ್ಲಿ ಸ್ವಹಿತ ಪರಹಿತಗಳೆರಡನ್ನೂ ಪರಿಗಣಿಸಬೇಕಾಗುತ್ತದೆ. ಆದ್ದರಿಂದ ವ್ಯಕ್ತಿ ಮತ್ತು ಸಮಾಜದ ಸರ್ವತೋಮುಖ ಹಿತಕ್ಕೆ ಸಹಾಯಕವಾಗುವಂಥವುಗಳನ್ನೇ ನಿಜವಾದ ಅರ್ಥದಲ್ಲಿ ಪುರುಷಾರ್ಥಗಳೆಂದು ಹೇಳಬಹುದು.

## ಸಾಧನ ಮತ್ತು ಸಾಧ್ಯ ಮೌಲ್ಯ

ಮೌಲ್ಯಗಳನ್ನು ಸಾಮಾನ್ಯವಾಗಿ ಎರಡು ಬಗೆಯಾಗಿ ವಿಭಾಗಿಸುವುದುಂಟು: ಸಾಧನ ಮೌಲ್ಯ(*instrumental value*) ಮತ್ತು ಸಾಧ್ಯ ಮೌಲ್ಯ (*intrinsic value*). ಯಾವುದು ನಮ್ಮ ಆವಶ್ಯಕತೆಯನ್ನು ನೇರವಾಗಿ ಪೂರೈಸದೆ, ಅದನ್ನು ಪೂರೈಸಲು ಪರೋಕ್ಷವಾಗಿ ಸಹಾಯಕವಾಗುತ್ತದೊ ಅದು ಸಾಧನ ಮೌಲ್ಯ. ಉದಾಹರಣೆಗೆ ಹಣ. ಹಣವನ್ನು ನಾವು ನೇರವಾಗಿ ಉಪಯೋಗಿಸಲಾಗುವುದಿಲ್ಲ. ಅದರಿಂದ ನಮ್ಮ ಆವಶ್ಯಕ ವಸ್ತುಗಳನ್ನು ಕೊಂಡುಕೊಳ್ಳಬಹುದು. ನಮ್ಮ ಹಸಿವನ್ನು ನೀಗಿಸಿಕೊಳ್ಳಲು ಹಣವನ್ನು ತಿನ್ನಲಾಗುವುದಿಲ್ಲ. ಆದರೆ ಅದರಿಂದ ನಾವು ತಿನ್ನಬಹುದಾದ ಆಹಾರ ಪದಾರ್ಥಗಳನ್ನು ಕೊಂಡುಕೊಳ್ಳಬಹುದು. ಆಹಾರವಸ್ತುವಿಗೆ ನೇರವಾಗಿ ನಮ್ಮ ಹಸಿವನ್ನು ನೀಗಿಸುವ ಸಾಮರ್ಥ್ಯವಿದೆ. ಆದ್ದರಿಂದ ಆಹಾರವನ್ನು ಸಾಧ್ಯಮೌಲ್ಯ ಎಂದು ಕರೆಯಬಹುದು, ಏಕೆಂದರೆ ನಮ್ಮ ಹಸಿವನ್ನು ನೀಗಿಸುವ ಸಾಧ್ಯತೆ ಅದರಲ್ಲಿ ಅಂತರ್ನಿಹಿತವಾಗಿದೆ. ಹಾಗೆಯೇ ಪುಸ್ತಕಗಳು ಸಾಧನ ಮೌಲ್ಯ, ಅವುಗಳಲ್ಲಿರುವ ವಿವಿಧ ಜ್ಞಾನವಿಷಯಗಳು ಸಾಧ್ಯ ಮೌಲ್ಯ—ಜ್ಞಾನಕ್ಕೆ ನಮ್ಮ ವ್ಯಕ್ತಿತ್ವವನ್ನು ಶ್ರೀಮಂತಗೊಳಿಸುವ ಸಾಮರ್ಥ್ಯವಿದೆ. ಉಪಾಧ್ಯಾಯರ ಕೈಯಲ್ಲಿರುವ ಬೆತ್ತ ಸಾಧನ ಮೌಲ್ಯ, ಅದರಿಂದ ಹೊಡೆಯುವ ಕ್ರಿಯೆ ಸಾಧ್ಯ ಮೌಲ್ಯ. (ನಾವು ರಕ್ತದಾನ ಮಾಡುವ) ಸೊಳ್ಳೆಗಳು ಸಾಧನ ಮೌಲ್ಯ, ಅವುಗಳಿಂದ ಹರಡಬಹುದಾದ ರೋಗಾಣುಗಳು ಸಾಧ್ಯಮೌಲ್ಯ. ಟಿ.ವಿ. ಒಂದು ಸಾಧನ ಮೌಲ್ಯ, ಅದರಲ್ಲಿ ಬರುವ ಕಾರ್ಯಕ್ರಮಗಳು—ಅವುಗಳು ಮನರಂಜನೆ ನೀಡುವುದರಿಂದ—ಸಾಧ್ಯ ಮೌಲ್ಯ. ಹಾಗೆಯೆ ಕಂಪ್ಯೂಟರ್ ಸಾಧನ ಮೌಲ್ಯ, ಅದರಲ್ಲಿರುವ ಸಾಫ್ಟ್‌ವೇರ್ ಪ್ಯಾಕೇಜುಗಳು ಸಾಧ್ಯ ಮೌಲ್ಯಗಳು. ಧಾರ್ಮಿಕ ಆಚರಣೆಗಳೆಲ್ಲವೂ ಸಾಧನ ಮೌಲ್ಯ, ಅವುಗಳ ಹಿಂದಿರುವ ಆಧ್ಯಾತ್ಮಿಕ ಆದರ್ಶ ಸಾಧ್ಯ

ಮೌಲ್ಯ. ಹೀಗೆ ಈ ಪಟ್ಟಿಯನ್ನು ಬೆಳಸುತ್ತ ಹೋಗಬಹುದು.

## ಸಾಧನ ಮೌಲ್ಯದ ಮೇಲುಗೈ

ಸಾಧನ ಮೌಲ್ಯಕ್ಕಿಂತ ಸಾಧ್ಯ ಮೌಲ್ಯವು ಅತ್ಯಂತ ಮುಖ್ಯ ಎಂಬುದು ಸ್ಪಷ್ಟವಾದ ವಿಷಯ. ಆದರೂ ನಮ್ಮ ಜೀವನದಲ್ಲಿ ಸಾಧನ ಮೌಲ್ಯವೇ ಸಾಧ್ಯ ಮೌಲ್ಯದ ಸ್ಥಾನವನ್ನು ಆಕ್ರಮಿಸಿಕೊಳ್ಳುವುದು, ಅದೇ ನಮ್ಮ ಜೀವನದ ಸರ್ವಸ್ವವಾಗುವುದು ಅತ್ಯಂತ ಆಶ್ಚರ್ಯದ ವಿಷಯ. ಹಣ ಕೇವಲ ಸಾಧನ ಮೌಲ್ಯವಾಗಿದ್ದರೂ ಅದರಲ್ಲಿ ಯಾವ ಸಾಧ್ಯ ಮೌಲ್ಯವೂ ಇಲ್ಲದಿದ್ದರೂ ನಮ್ಮ ಆವಶ್ಯಕತೆಗಿಂತ ಅತ್ಯಧಿಕವಾಗಿ ಹಣವನ್ನು ಶೇಖರಿಸಲು, ಅದನ್ನು ಕೂಡಿಡಲು ನಮ್ಮೆಲ್ಲ ಪ್ರಯತ್ನ ಮಾಡುತ್ತೇವೆ. ಹಣದ ಮೌಲ್ಯವೆಷ್ಟು ಎಂಬುದನ್ನು ಕೆಳಗಿನ ಹೇಳಿಕೆ ಸ್ಪಷ್ಟಪಡಿಸುತ್ತದೆ:

'ಹಣದಿಂದ ಹಾಸಿಗೆ ಸಿಗುತ್ತದೆ, ನಿದ್ರೆ ಸಿಕ್ಕುವುದಿಲ್ಲ; ಹಣದಿಂದ ಆಹಾರ ಪದಾರ್ಥಗಳು ಸಿಗುತ್ತವೆ, ಬಾಯಿರುಚಿ (*appetite*) ಸಿಕ್ಕುವುದಿಲ್ಲ; ಹಣದಿಂದ ಔಷಧ ದೊರೆಯುತ್ತದೆ, ಆರೋಗ್ಯ ಸಿಗದು ; ಹಣದಿಂದ ಗ್ರಂಥಗಳನ್ನು ಪಡೆಯಬಹುದು, ತಿಳುವಳಿಕೆ ದೊರೆಯದು; ಹಣದಿಂದ ಕಟ್ಟಡ ಕಟ್ಟಬಹುದು, ಮನೆಯಾಗದು ; ಹಣದಿಂದ ಭೂಷಣ ವಸ್ತುಗಳು ದೊರೆಯುತ್ತವೆ, ಸೌಂದರ್ಯ ದೊರೆಯದು ; ಹಣದಿಂದ ನಾಗರಿಕತೆ ದೊರೆಯುತ್ತದೆ, ಸಂಸ್ಕೃತಿಯಲ್ಲ ; ಹಣದಿಂದ ಧರ್ಮ ಸಿಗಬಹುದು, ಆಧ್ಯಾತ್ಮಿಕತೆ ಸಿಗದು ; ಹಣದಿಂದ ಸ್ವರ್ಗವನ್ನು ಬಿಟ್ಟು ಎಲ್ಲಿಗೆ ಬೇಕಾದರೂ ಪಾಸ್‌ಪೋರ್ಟ್ ಪಡೆಯಬಹುದು' (ಇಂಗ್ಲಿಷ್‌ನಿಂದ ಅನುವಾದಿತ).

**ಐಶ್ವರ್ಯ ಉಪ್ಪುನೀರಿನಂತೆ, ಕುಡಿದಷ್ಟೂ ಬಾಯಾರಿಕೆ ಜಾಸ್ತಿಯಾಗುತ್ತದೆ.**

ಇಷ್ಟಾದರೂ ಹಣದ ವ್ಯಾಮೋಹದಿಂದ ಎಲ್ಲ ಉಪಾಯದ ಮೂಲಕ ಅದನ್ನು ಸಂಗ್ರಹಿಸುವುದನ್ನೂ ಕೂಡಿಡುವುದನ್ನೂ ನೋಡಿದರೆ ಆಶ್ಚರ್ಯವಾಗುತ್ತದೆ. ಜಿಪುಣನ ವಿಷಯದಲ್ಲಿ ಒಂದು ಹಾಸ್ಯಮಯ ಶ್ಲೋಕವಿದೆ :

**ಕೃಪಣೇನ ಸಮೋ ದಾತಾ ನ ಭೂತೋ ನ ಭವಿಷ್ಯತಿ ।**
**ಅಸ್ಪೃಶನ್ ಏವ ವಿತ್ತಾನಿ ಯಃ ಪರೇಭ್ಯಃ ಪ್ರಯಚ್ಛತಿ ॥**

'ಜಿಪುಣನಿಗೆ ಸಮಾನನಾದ ದಾನಿಯು ಭೂತಭವಿಷ್ಯತ್ತುಗಳೆರಡರಲ್ಲೂ ಇರಲಾರನು. ಅವನು ಹಣದ ಸ್ಪರ್ಶವನ್ನೂ ಕೂಡ ಮಾಡದೆ ಇತರರಿಗೆ ನೀಡುತ್ತಾನೆ.'

ಅನೇಕರು ಗ್ರಂಥ ಸಂಗ್ರಹದಲ್ಲಿ, ಬಹು ಗ್ರಂಥಗಳನ್ನು ಓದುವುದರಲ್ಲಿ ಆಸಕ್ತರಾಗಿರುತ್ತಾರೆಯೇ ಹೊರತು ಅದರಲ್ಲಿರುವ ಭಾವನೆಗಳನ್ನು ಮೈಗೂಡಿಸಿಕೊಳ್ಳುವುದರಲ್ಲಿ ಅಲ್ಲ. ಅನೇಕರು ಸಾಂಪ್ರದಾಯಿಕ ಧಾರ್ಮಿಕ ಆಚರಣೆಯಲ್ಲಿ ಮಗ್ನರಾಗಿರುತ್ತಾರೆಯೇ ಹೊರತು ಅದರ ಹಿಂದಿರುವ ಆಧ್ಯಾತ್ಮಿಕ ಆದರ್ಶವನ್ನು ಲೆಕ್ಕಿಸುವುದೇ ಇಲ್ಲ. ಇದರಿಂದ ಎಷ್ಟೋ ಧಾರ್ಮಿಕ ಕ್ರಿಯಾವಿಧಿಗಳನ್ನು ಅನುಸರಿಸಿದರೂ, ಎಷ್ಟೋ ದೇವಸ್ಥಾನಗಳಿಗೆ ಹೋದರೂ, ಜಪ ಮಾಡಿದರೂ ಅವರ ವ್ಯಕ್ತಿತ್ವದಲ್ಲಿ ಯಾವ ಬದಲಾವಣೆಯೂ ಉಂಟಾಗುವುದಿಲ್ಲ. ಅನೇಕರು ಬಾಹ್ಯವಾಗಿ ನೈತಿಕರಾಗಿರುತ್ತಾರೆಯೇ ಹೊರತು ಆಂತರಿಕ ನೈತಿಕ ಭಾವವನ್ನು ಹೊಂದಿರುವುದಿಲ್ಲ. ಅವರು ಯಾರನ್ನೂ ಹಿಂಸಿಸುವುದಿಲ್ಲ, ಪ್ರಾಣಿ ಹಿಂಸೆಯನ್ನೂ ಮಾಡುವುದಿಲ್ಲ—ಪ್ರಾಣಿಗಳಿಗೆ ಆಹಾರಾದಿಗಳನ್ನು ಒಂದು *ರಿಚುವಲ್* ಆಗಿ ನೀಡುತ್ತಾರೆ—ಆದರೆ ವ್ಯವಹಾರದಲ್ಲಿ ಎಲ್ಲ ರೀತಿಯ ಮೋಸದ ಮಾರ್ಗವನ್ನು ಅನುಸರಿಸಿ ಜನರ ಸರ್ವಸ್ವವನ್ನೂ ಹೀರುತ್ತಾರೆ. ಅಂಥವರಲ್ಲಿ ಅಧಾರ್ಮಿಕ ಜೀವನ ಮತ್ತು ಧಾರ್ಮಿಕ ಆಚರಣೆ ಇವುಗಳ ಸುಂದರ ಸಮನ್ವಯವನ್ನು ಕಾಣಬಹುದು!

## ಸಾಧ್ಯ ಸಾಧನವಾಗುವುದು

ಮೇಲಿನ ನಿರೂಪಣೆ ಸಾಧನ ಮೌಲ್ಯವು ಸಾಧ್ಯ ಮೌಲ್ಯದ ಸ್ಥಾನವನ್ನು ಪಡೆಯುವ ನಿರೂಪಣೆಯಾಯಿತು. ಕೆಲವೊಮ್ಮೆ ಸಾಧ್ಯ ಮೌಲ್ಯವೇ ಸಾಧನವಾಗುವ ಶೋಚನೀಯ ಸಂದರ್ಭಗಳುಂಟು. ಉದಾಹರಣೆಗೆ, ರುಚಿಕರವಾದ ಆಹಾರ ಪದಾರ್ಥಗಳು ಸುಖಕ್ಕೆ ಸಾಧನವಾಗಿ ಅವನ್ನು ಆ ಸುಖಕ್ಕಾಗಿಯೇ ಸೇವಿಸುವವರು ಅನೇಕರಿರುತ್ತಾರೆ. ಹಾಗೆಯೇ ಜ್ಞಾನವು ಕೀರ್ತಿಗೆ ಸಾಧನವಾಗಬಹುದು. ಸಂಗೀತವು ಒಂದು ಸಾಧ್ಯ ಮೌಲ್ಯ. ಅದನ್ನು ಸಂಗೀತಗಾರನು ತನ್ನ ಸಂತೃಪ್ತಿಗಾಗಿ, ಅದರ ಮೂಲಕ ಇತರರ ಸಂತೋಷಕ್ಕಾಗಿ ಅಭ್ಯಸಿಸಬೇಕು ಮತ್ತು ಹಾಡಬೇಕು. ಆದರೆ ಆ ಪ್ರತಿಭೆಯನ್ನು ಹಣ ಕೀರ್ತಿ ಇತ್ಯಾದಿಗಳನ್ನು ಸಂಪಾದಿಸಲು ಉಪಯೋಗಿಸಿದಾಗ ಅದು ಸಾಧನ ಮೌಲ್ಯವಾಗುತ್ತದೆ—ಅದರ ನೈಜ ಸಾಧ್ಯತೆಯನ್ನು ಕಡೆಗಣಿಸಿದಂತಾಗುತ್ತದೆ. ಹಾಗೆಯೇ ಆಟವೂ ಕೂಡ. ಅದರ ನಿಜವಾದ ಮೌಲ್ಯವಿರುವುದು ದೇಹ ಮನಸ್ಸುಗಳಿಗೆ ಆರೋಗ್ಯವನ್ನು ನೀಡುವುದರಲ್ಲಿ. ಆದರೆ ಅದೂ ಕೂಡ ಇತ್ತೀಚೆಗೆ ಒಂದು ಪ್ರೊಫೆಷನ್ ಆಗುತ್ತಿದೆ. ಕೆಲಸವನ್ನು ಸಾಧನ ಮತ್ತು ಸಾಧ್ಯಗಳೆರಡೂ ರೀತಿಯಲ್ಲಿ ಮಾಡಬಹುದು. ಅದನ್ನು ಕೀರ್ತಿ ಧನಾದಿಗಳ ಸಂಪಾದನೆಗಾಗಿ ಮಾಡಿದರೆ ಸಾಧನ ಮೌಲ್ಯವಾಗುತ್ತದೆ. ಆದರೆ ಅದನ್ನು ಅದಕ್ಕಾಗಿಯೇ ಮಾಡಿದರೆ, ಅದರಲ್ಲಿಯೇ ಸಂತೃಪ್ತಿಯನ್ನೂ ಕೃತಾರ್ಥತೆಯನ್ನೂ ಪಡೆಯುವಂತಾದರೆ ಆಗ ಅದು ಸಾಧ್ಯ ಮೌಲ್ಯವಾಗುತ್ತದೆ. ಇದು ಆದರ್ಶ.

## ವಿಕ್ರಯ ಮತ್ತು ನೈಜ ಮೌಲ್ಯ

ಇನ್ನೊಂದು ರೀತಿಯಲ್ಲಿ ನಾವು ಮೌಲ್ಯವನ್ನು ವಿಭಾಗಿಸಬಹುದು: ವಿಕ್ರಯ ಮೌಲ್ಯ ಮತ್ತು ನೈಜ ಮೌಲ್ಯ. ನೈಜ ಮೌಲ್ಯ

ವಸ್ತುವಿನ ಉಪಯುಕ್ತತೆಯನ್ನೂ ಅದರ ಬಾಳಿಕೆಯನ್ನೂ ಸೂಚಿಸುತ್ತದೆ. ವಿಕ್ರಯ ಮೌಲ್ಯ ಅದರ ಮಾರಾಟವನ್ನು ಹೆಚ್ಚಿಸುವುದಕ್ಕಾಗಿ ಅನುಸರಿಸುವ ಹಲವು ವಿಧಾನಗಳನ್ನು ಸೂಚಿಸುತ್ತದೆ. ಉದಾಹರಣೆಗೆ ವಸ್ತುವಿನ ಆಕರ್ಷಕ ಹೊರ ಆವರಣ, ಜಾಹಿರಾತುಗಳು ಇತ್ಯಾದಿ. ಇವು ವಸ್ತುವಿನ ನೈಜ ಮೌಲ್ಯ ಏನೇ ಇದ್ದರೂ ಅದರ ವಿಕ್ರಯ ಮೌಲ್ಯವನ್ನು ಹೆಚ್ಚಿಸುತ್ತವೆ. ಒಂದು ಪುಸ್ತಕದ ವಿಷಯ ವಸ್ತು ಎಂಥದೇ ಆಗಿದ್ದರೂ ಆಕರ್ಷಕ ಶೀರ್ಷಿಕೆಯ ಮೂಲಕ, ಮನ ಸೆಳೆಯುವ ರಕ್ಷಾಪುಟದ ಮೂಲಕ ಅದರ ವಿಕ್ರಯಮೌಲ್ಯವನ್ನು ಅಧಿಕಗೊಳಿಸಬಹುದು. ಇಂದಿನ ವಾಣಿಜ್ಯ ಯುಗದಲ್ಲಿ ನೈಜ ಮೌಲ್ಯಕ್ಕಿಂತ ವಿಕ್ರಯ ಮೌಲ್ಯವೇ ಹೇಗೆ ಪ್ರಾಧಾನ್ಯವನ್ನು ಪಡೆಯುತ್ತಿದೆ ಎಂಬುದು ಅತ್ಯಂತ ಸ್ಪಷ್ಟ. ಒಬ್ಬ ವ್ಯಕ್ತಿ ಉತ್ತಮ ಭಾವನೆಗಳನ್ನು ಹೊಂದಿರಬಹುದು, ಆದರೆ ಅವನ್ನು ಸರಿಯಾದ ಭಾಷೆಯಲ್ಲಿ ವ್ಯಕ್ತ ಪಡಿಸುವ ಸಾಮರ್ಥ್ಯ ಹೊಂದಿರದೆ ಇರಬಹುದು. ಇನ್ನೋರ್ವನು ಸಾಮಾನ್ಯ ಭಾವನೆಗಳನ್ನು ಹೊಂದಿದ್ದರೂ ಅವನ್ನು ಸುಂದರ ಭಾಷೆಯಲ್ಲಿ ವ್ಯಕ್ತಪಡಿಸಿ ಜನರಿಗೆ ಪ್ರಚಾರ ಮಾಡಬಹುದು. ಇಲ್ಲಿ ಸುಂದರ ಭಾಷೆ ಅವನ ಭಾವನೆಗಳ ವಿಕ್ರಯ ಮೌಲ್ಯವಾಗುತ್ತದೆ. ಆದ್ದರಿಂದಲೇ 'ನಿನ್ನ ಭಾವನೆಗಳನ್ನು ವಿಕ್ರಯಿಸುವ ವಿಧಾನ ನಿನಗೆ ಗೊತ್ತಿರಬೇಕು' (*You must know how to sell your ideas*) ಎಂದು ಹೇಳುವ ವಾಡಿಕೆ ಇದೆ.

ಇದು ವ್ಯಕ್ತಿಗೂ ಅನ್ವಯಿಸುತ್ತದೆ. ಯಥಾರ್ಥ ವ್ಯಕ್ತಿಯೇ ಬೇರೆ, ತೋರಿಕೆಯ ವ್ಯಕ್ತಿಯೇ ಬೇರೆ. ಒಳ್ಳೆಯ ಉಡುಪಿನ ಮೂಲಕ ಚೆನ್ನಾಗಿ ಮಾತನಾಡುವುದರ ಮೂಲಕ, ನಯ ವಿನಯ ವರ್ತನೆಯ ಮೂಲಕ ವ್ಯಕ್ತಿಗಳು ತಮ್ಮ ನೈಜಸ್ವರೂಪವನ್ನು ಮರೆಸಿ ತಮ್ಮನ್ನು ತಾವು ಉತ್ತಮ ರೀತಿಯಲ್ಲಿ ಪ್ರದರ್ಶಿಸಿಕೊಳ್ಳುತ್ತಾರೆ. ನಮ್ಮ ಹೆಚ್ಚಿನ ಮಾನಸಿಕ ಶಕ್ತಿ ನಾವೇನಾಗಿಲ್ಲವೊ ಅದನ್ನು ತೋರಿಸಿಕೊಳ್ಳುವುದರಲ್ಲಿ ವ್ಯಯವಾಗುತ್ತದೆ ಎಂದು ಮನಶ್ಶಾಸ್ತ್ರಜ್ಞರು ಅಭಿಪ್ರಾಯಪಡುತ್ತಾರೆ. ಲಿನ್ ಯುಟಾಂಗ್ ಎಂಬ ಖ್ಯಾತ ಬರಹಗಾರನು ಹೇಳುತ್ತಾನೆ: 'ತನ್ನ ಸ್ವಾಭಾವಿಕ ವ್ಯಕ್ತಿತ್ವದಂತೆ ಇರುವ ಧೈರ್ಯ ಬಹಳ ಅಪರೂಪಕ್ಕೆ ಕಂಡುಬರುವಂತಹುದು.... ತಿಳಿದೊ, ತಿಳಿಯದೆಯೊ, ನಾವೆಲ್ಲರೂ ಈ ಜೀವನದಲ್ಲಿ ನಟರಾಗಿದ್ದೇವೆ—ಪ್ರೇಕ್ಷಕರು ಯಾವ ಪಾತ್ರ ಮತ್ತು ಶೈಲಿಯನ್ನು ಅನುಮೋದಿಸುತ್ತಾರೊ ಅದಕ್ಕನುಗುಣವಾಗಿ ನಾವು ನಟಿಸುತ್ತೇವೆ' (*Importance of Living*, p.99). ನಟನೆಯ ಮೂಲಕ ನಮ್ಮ ವಿಕ್ರಯ ಮೌಲ್ಯವನ್ನು ಹೆಚ್ಚಿಸಿಕೊಂಡು ಸಾಮಾಜಿಕ ಸಂತೆಯಲ್ಲಿ ನಮ್ಮನ್ನು ಮಾರಿಕೊಳ್ಳುತ್ತೇವೆ.

## ಯಥಾರ್ಥ ವ್ಯಕ್ತಿ

ಆಂತರಿಕ ಖಾಲಿತನವನ್ನು ಹೋಗಲಾಡಿಸಲು ಅನೇಕರು ವಿವಿಧ ಮುಖವಾಡಗಳನ್ನು ಹಾಕಿಕೊಳ್ಳುತ್ತಾರೆ—ಕುರೂಪಿಯು ವೇಷ ಭೂಷಣಗಳ ಮೂಲಕ ಆಕರ್ಷಕ ವ್ಯಕ್ತಿಯಾಗಲು ಪ್ರಯತ್ನಿಸುವಂತೆ. 'ಜೀವನದ ಅರ್ಥಹೀನತೆಯು ಕೆಲವೊಮ್ಮೆ ಅಧಿಕಾರಲಾಲಸೆಯಾಗಿಯೂ.... ಧನದಾಸೆಯಾಗಿಯೂ ತೀವ್ರಭೋಗಾಸಕ್ತಿಯಾಗಿಯೂ ಅಭಿವ್ಯಕ್ತವಾಗುತ್ತದೆ,' (*Man's Search for Meaning*, p.129) ಎಂದು ವಿಕ್ಟರ್ ಫ್ರಾಂಕ್ಲ್ ಹೇಳುತ್ತಾನೆ.

ಶ್ರೀರಾಮಕೃಷ್ಣರು ಅತ್ಯಂತ ಯಥಾರ್ಥ ವ್ಯಕ್ತಿಗಳಾಗಿದ್ದರು. ಅವರೆಂದೂ ತಾವೇನಾಗಿಲ್ಲವೊ ಅದನ್ನು ಪ್ರದರ್ಶಿಸಿಕೊಳ್ಳಲು ಪ್ರಯತ್ನಿಸಲೇ ಇಲ್ಲ. ಅವರ ಮಾತು ವರ್ತನೆಗಳೆಲ್ಲ ಅತ್ಯಂತ ಸ್ವಾಭಾವಿಕವಾಗಿತ್ತು. ಅವರು ಒಮ್ಮೆ ದೇವೇಂದ್ರನಾಥ ಟಾಗೂರರ (ರವೀಂದ್ರನಾಥರ ತಂದೆ, ಬ್ರಹ್ಮಸಮಾಜದ ಹಿರಿಯ ಮುಂದಾಳು) ಮನೆಗೆ ಹೋಗಿದ್ದರು. ಮಾತುಕತೆಯ ನಂತರ ಶ್ರೀರಾಮಕೃಷ್ಣರು ಹೊರಡುವಾಗ 'ಮತ್ತೊಮ್ಮೆ ನಮ್ಮ ಮನೆಗೆ ಬನ್ನಿ' ಎಂದು ಟಾಗೂರರು ಕೇಳಿಕೊಂಡರು. ಶ್ರೀರಾಮಕೃಷ್ಣರು ಆಗಲಿ ಎಂದಿದ್ದರು. ಆದರೆ ಅನಂತರ ಟಾಗೂರರು, ಇನ್ನೊಮ್ಮೆ ಬರುವಾಗ ಒಳ್ಳೆಯ ಪೋಷಾಕಿನಲ್ಲಿ ಬರಬೇಕೆಂದು ಇತರರ ಮೂಲಕ ಹೇಳಿಕಳುಸಿದರು. ಶ್ರೀರಾಮಕೃಷ್ಣರು ಅದನ್ನು ಕೇಳಿ, 'ಅದು ಸಾಧ್ಯವಿಲ್ಲ. ನಾನು ಬಾಬು ಆಗಲು ಇಷ್ಟ ಪಡುವುದಿಲ್ಲ.' ಎಂದು ಹೇಳಿ ಮತ್ತೆ ಟಾಗೂರರ ಮನೆಗೆ ಹೋಗಲೇ ಇಲ್ಲ.

## ಉಪದೇಶದ ವಿಕ್ರಯ

ಅನೇಕರು ಇತರರಿಗೆ ಉಪದೇಶ ನೀಡುತ್ತಾರೆ, ಆದರೆ ಅದರಂತೆ ಅವರು ನಡೆದುಕೊಳ್ಳುವುದಿಲ್ಲ. ಅಂದರೆ ತಮ್ಮ ಉಪದೇಶಗಳನ್ನು ವಿಕ್ರಯಿಸುತ್ತಾರೆಯೇ ಹೊರತು, ಅವುಗಳ ನೈಜ ಮೌಲ್ಯವನ್ನು ತಾವು ಅನುಭವಿಸುವುದಿಲ್ಲ. ಅವರಲ್ಲಿ ಕೆಲವರಾದರೂ ಉಚಿತವಾಗಿ ವಿಕ್ರಯಿಸುತ್ತಾರೆ! ಅವುಗಳ ವಿಕ್ರಯ ಮೌಲ್ಯವೊಂದನ್ನೇ ಅವರು ಗುರುತಿಸುವುದು, ಅಥವಾ ನೈಜ ಮೌಲ್ಯವನ್ನು ಗುರುತಿಸಿದರೂ ಅದನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಲು ಅಸಮರ್ಥರಾಗಿರುತ್ತಾರೆ. ಹೀಗೆ ನೈಜ ಮೌಲ್ಯಕ್ಕಿಂತ ವಿಕ್ರಯ ಮೌಲ್ಯವೇ ಎಲ್ಲೆಲ್ಲಿಯೂ, ಎಲ್ಲ ಕ್ಷೇತ್ರಗಳಲ್ಲಿಯೂ ಪ್ರಾಧಾನ್ಯವನ್ನು ಪಡೆಯುತ್ತದೆ. ಕೆಲವರು ಕೆಲವು ಆಧ್ಯಾತ್ಮಿಕ ಅನುಭವಗಳನ್ನು ಪಡೆದ ಮೇಲೆ ಅವನ್ನು ತಾವೇ ಅನುಭವಿಸುವ ಮೊದಲು ವಿಕ್ರಯಿಸುತ್ತ, ಅಂದರೆ ಇತರರಿಗೆ ಹೇಳುತ್ತಾ ಹೋಗುತ್ತಾರೆ. ಇದರ ಪರಿಣಾಮವಾಗಿ ಆ ಅನುಭವಗಳ ಪರಿಣಾಮ ಅವರ ವ್ಯಕ್ತಿತ್ವದ ಮೇಲೆ ಅಷ್ಟಾಗಿ ಆಗುವುದೇ ಇಲ್ಲ.

## ತನ್ನನ್ನು ತಾನು ಅಳೆಯುವ ಸಾಮರ್ಥ್ಯ

ಈ ವಾಣಿಜ್ಯ ಪ್ರವೃತ್ತಿಯಿಂದಾಗಿ ನಮ್ಮನ್ನು ನಾವು ಅಳೆಯುವ ಸಾಮರ್ಥ್ಯವನ್ನು ಕಳೆದುಕೊಳ್ಳುತ್ತೇವೆ. ಒಂದು ವಸ್ತುವಿನ ಮೌಲ್ಯ ಅದು ಹೇಗೆ ಮಾರಾಟವಾಗುತ್ತದೆ ಎಂಬುದನ್ನು ಅವಲಂಬಿಸಿರುವಂತೆಯೇ ನಮ್ಮ ಯೋಗ್ಯತೆಯೂ ಜನರು ಹೇಗೆ ಬೆಲೆ ಕಟ್ಟುತ್ತಾರೆ, ಅಂದರೆ ನಮ್ಮನ್ನು ಎಷ್ಟು ಹೊಗಳುತ್ತಾರೆ, ಗೌರವಿಸುತ್ತಾರೆ ಇತ್ಯಾದಿಗಳನ್ನು ಅವಲಂಬಿಸಿರುತ್ತದೆ. ನನ್ನನ್ನು ಜನರು ಬಹಳ ಒಳ್ಳೆಯ ವ್ಯಕ್ತಿ ಎಂದು ಪ್ರಶಂಸಿಸಿದರೆ, ನಾನು ಒಳ್ಳೆಯ ವ್ಯಕ್ತಿ ಎಂದೇ ತೀರ್ಮಾನಿಸಿಕೊಂಡುಬಿಡುತ್ತೇನೆ. ನಾನು ನಿಜವಾಗಿಯೂ ಒಳ್ಳೆಯ ವ್ಯಕ್ತಿಯೇ ಅಲ್ಲವೆ ಎಂದು ವಿಮರ್ಶಿಸುವ ತಂಟೆಗೇ ಹೋಗುವುದಿಲ್ಲ. ಜನರು ನನ್ನನ್ನು ತುಂಬ ಉನ್ನತ ಆಧ್ಯಾತ್ಮಿಕ ವ್ಯಕ್ತಿಯೆಂದು ಪರಿಗಣಿಸತೊಡಗಿದರೆ ನಾನು ಅದನ್ನೇ ನೆಚ್ಚಿಕೊಂಡು ಇದ್ದುಬಿಡುತ್ತೇನೆ. ಮುಂದಿನ ಪ್ರಗತಿಯನ್ನು ಸಾಧಿಸುವ ಪ್ರವೃತ್ತಿ ಹೊರಟುಹೋಗುತ್ತದೆ.

> ಮೌಲ್ಯಗಳ ನಿಜವಾದ ನೆಲೆಯನ್ನು ಗುರುತಿಸಲು ತನ್ನೊಳಗೇ ತನ್ನಾತ್ಮದ ಕಡೆಯೇ ತಿರುಗಬೇಕೇ ಹೊರತು ಬೇರೆಲ್ಲೂ ಅದನ್ನು ಹುಡುಕುವಂತಿಲ್ಲ.
>
> —ಅಬ್ರಹಾಂ ಮಾಸ್ಲೊ.

ಇತರರ ಪ್ರಶಂಸೆಯ ಆಧಾರದ ಮೇಲೆ ತಾನು ದೊಡ್ಡ ಸಂಗೀತಗಾರನೆಂದು ಭಾವಿಸುವ ವ್ಯಕ್ತಿಯು ಯಾರಾದರೂ ಅವನ ಸಂಗೀತವನ್ನು ನಿಂದಿಸಿದರೆ ಕಿಡಿಕಿಡಿಯಾಗುತ್ತಾನೆ, ಮತ್ತು ತನ್ನ ಸಂಗೀತಕ್ಕೆ ಸಾಕಷ್ಟು ಮನ್ನಣೆ ದೊರೆಯುತ್ತಿಲ್ಲ ಎಂದು ಯಾವಾಗಲೂ ಪರಿತಪಿಸುತ್ತಿರುತ್ತಾನೆ. ವ್ಯಕ್ತಿಯು ತನ್ನನ್ನು ತಾನೇ ಅಳೆಯುವ ಸಾಮರ್ಥ್ಯವನ್ನು ಪಡೆದಿರಬೇಕು. ಇತರರು ನಮ್ಮ ಬೆಲೆಯನ್ನು ನಿರ್ಣಯಿಸುವುದಕ್ಕೆ ನಾವೇನೂ ಮಾರಾಟ ವಸ್ತುವಲ್ಲ. ವಿಕ್ರಯ ಮೌಲ್ಯ ಪ್ರಧಾನವಾಗುತ್ತ ಹೋದಂತೆಲ್ಲ ವಸ್ತುಗಳ ಮತ್ತು ವ್ಯಕ್ತಿಗಳ ನೈಜ ಮೌಲ್ಯ ಕಡಿಮೆಯಾಗುತ್ತಾ ಬರುತ್ತದೆ. ಮಾನವನು ತನ್ನ ಜೀವನದ ನೈಜ ಮೌಲ್ಯವನ್ನು ಮರೆತು ಸಮಾಜವೆಂಬ ಮಾರುಕಟ್ಟೆಯು ಯಾವ ಮೌಲ್ಯವನ್ನು ನಿರ್ಣಯಿಸುತ್ತದೊ ಅದಕ್ಕನುಗುಣವಾಗಿ ಬದುಕುತ್ತಾನೆ.

### ವಸ್ತುತಂತ್ರ ಮತ್ತು ಪುರುಷತಂತ್ರ

ಮೌಲ್ಯ ವಸ್ತುತಂತ್ರವೇ ಅಥವಾ ಪುರುಷತಂತ್ರವೇ ಎಂಬ ಅಂಶವನ್ನೂ ನಾವು ವಿಚಾರಿಸಬೇಕಾಗುತ್ತದೆ. ವ್ಯಕ್ತಿಯ ಮನೋಭಾವಕ್ಕೆ ಅನುನುಗುಣವಾಗಿ ವಸ್ತುಗಳ ಮೌಲ್ಯ ಬದಲಾಗುತ್ತಾ ಹೋಗುತ್ತದೆ. ಮನಸ್ಥಿತಿ ಸರಿಯಿಲ್ಲದೆ ಇರುವಾಗ ಉತ್ತಮ ಆಹಾರವೂ ರುಚಿಸದೆ ಇರಬಹುದು, ತಿಂದರೂ ಜೀರ್ಣವಾಗದೆ ಇರಬಹುದು. ಅಂದರೆ ಆಹಾರ ಪದಾರ್ಥವು ಆ ಸಂದರ್ಭದಲ್ಲಿ ತನ್ನ ಆಹಾರಮೌಲ್ಯವನ್ನು ಕಳೆದುಕೊಳ್ಳುತ್ತದೆ. ರೋಗಿಯ ನಂಬಿಕೆಯನ್ನು ಅನುಸರಿಸಿ ಔಷಧ ಮೌಲ್ಯವಿಲ್ಲದ ವಸ್ತುಗಳೂ ರೋಗವನ್ನು ವಾಸಿಮಾಡಿದ ಸಂದರ್ಭಗಳಿವೆ. ಇಂತಹ ಸಂದರ್ಭಗಳು ವಸ್ತುಗಳ ಮೌಲ್ಯ ವ್ಯಕ್ತಿಯನ್ನು ಅವಲಂಬಿಸಿದೆ, ವಸ್ತುಗಳಿಗೆ ಸ್ವತಃ ಯಾವ ಮೌಲ್ಯವೂ ಇಲ್ಲ ಎಂಬುದನ್ನು ಸೂಚಿಸುತ್ತದೆ. ಆದರೂ ಇದನ್ನು ಸಾರ್ವತ್ರಿಕವಾಗಿ ಹೇಳುವಂತಿಲ್ಲ. ನಮಗೆ ಹಸಿವಾದಾಗ ಉತ್ತಮ ಆಹಾರವನ್ನೇ ಸೇವಿಸಬೇಕಾಗುತ್ತದೆ, ಏನಾದರೂ ತಿನ್ನುವಂತಿಲ್ಲ. ಆದ್ದರಿಂದ ಮೌಲ್ಯ ವಸ್ತುತಂತ್ರವೂ ಹೌದು ಪುರುಷತಂತ್ರವೂ ಹೌದು ಎಂದು ಹೇಳಬಹುದು. ಮೌಲ್ಯ ವಸ್ತುವನ್ನೂ ವ್ಯಕ್ತಿಯನ್ನೂ ಸಂದರ್ಭವನ್ನೂ ಅವಲಂಬಿಸಿರುತ್ತದೆ.

# ಪುಟವಿಟ್ಟ ಚಿನ್ನ



ಸ್ವಾಮಿ ಯೋಗಾನಂದರು

ತಮ್ಮ ೧೬ ಜನ ನೇರ ಶಿಷ್ಯರೂ ಒಂದೊಂದು ಯೋಗಶಕ್ತಿಯ ಅವತಾರವೆಂದು ಶ್ರೀರಾಮಕೃಷ್ಣರೇ ಗುರುತಿಸಿದ್ದರು. ೩೦ನೇ ಮಾರ್ಚ್, ೧೮೬೧ರಲ್ಲಿ ಜನಿಸಿದ ‘ಜೋಗಿನ್’ ಮುಂದೆ ‘ಯೋಗಾನಂದ’ ಎಂದು ಸುಪ್ರಸಿದ್ಧರಾದ ನೇರ ಶಿಷ್ಯರು ಶ್ರೀಕೃಷ್ಣನ ಸಖನಾದ ಅರ್ಜುನನ ಅವತಾರವೆಂದು ಸ್ವತಃ ಶ್ರೀರಾಮಕೃಷ್ಣರೇ ಹೇಳುತ್ತಿದ್ದರು.

ಆಧ್ಯಾತ್ಮಿಕತೆಯಲ್ಲಿ ಅತ್ಯುನ್ನತ ಮಟ್ಟಕ್ಕೆ ವಿಕಸಿತರಾದ ಯೋಗಾನಂದರು ನೋಡಲು ಬಹು ಸ್ಫುರದ್ರೂಪಿ. ಒಮ್ಮೆ ಮಧ್ಯ ದೇಶದ ಯಾವುದೋ ಒಂದು ಊರಿಗೆ ರೈಲುಗಾಡಿಯಲ್ಲಿ ಪ್ರಯಾಣ ಹೊರಟರು. ಒಬ್ಬರೇ ಪ್ರಯಾಣ ಮಾಡುತ್ತಿರುವಾಗ ಯಾವುದೋ ಒಂದು ನಿಲ್ದಾಣದಲ್ಲಿ ವೇಶ್ಯಾವೃತ್ತಿಯ ಸುಂದರ ಯುವತಿಯೊಬ್ಬಳು ಹತ್ತಿದಳು. ಅವರಿದ್ದ ಬೋಗಿಯಲ್ಲಿ ಬೇರೆ ಯಾರೂ ಇರಲಿಲ್ಲ. ಅವಳ ದೃಷ್ಟಿಯು ಯೋಗಾನಂದರ ಮೇಲೆ ಬಿದ್ದ ತಕ್ಷಣವೇ ಮೋಹಪರವಶಳಾಗಿ, ‘ನನ್ನದೆಲ್ಲವನ್ನೂ ನಿಮ್ಮ ಪಾದಗಳಿಗೆ ಸಮರ್ಪಿಸುವೆ. ದಯವಿಟ್ಟು ನನ್ನನ್ನು ಸ್ವೀಕರಿಸಿ’ ಎಂದು ಅಂಗಲಾಚತೊಡಗಿದಳು. ಯೋಗಾನಂದರು ಪ್ರತಿಕ್ರಿಯೆ ತೋರಿಸದಿದ್ದಾಗ ಸಹನೆ ಕಳೆದುಕೊಂಡ ಆಕೆ, ‘ನನ್ನ ಮಾತನ್ನು ಕೇಳದಿದ್ದರೆ ಈಗಲೇ ಅಲಾರಂ ಸರಪಣಿಯನ್ನು ಎಳೆದು ರೈಲುಗಾಡಿಯನ್ನು ನಿಲ್ಲಿಸಿ ನನ್ನ ಮೇಲೆ ದೌರ್ಜನ್ಯ ನಡೆಸಿದರೆಂದು ದೂರು ನೀಡುವೆ’ ಎಂದು ಬೆದರಿಸಿದಳು. ಅವಳ ಕೈಚೀಲದ ತುಂಬಾ ಮದ್ಯದ ಶೀಷೆಗಳಿದ್ದವು. ಕುಡಿಯುತ್ತಾ ಕುಡಿಯುತ್ತಾ ಮತ್ತಷ್ಟು ಉನ್ಮತ್ತಳಾದ ಅವಳು ಕೂತ ಜಾಗದಿಂದ ಮೇಲೆದ್ದಳು. ಅಷ್ಟರಲ್ಲಿ ಮತ್ತೊಂದು ನಿಲ್ದಾಣ ಬರಲು ಯೋಗಾನಂದರು ತತ್‌ಕ್ಷಣವೇ ಇಳಿದುಬಿಟ್ಟರು. ಕೃಪಾಮಯಿಯಾದ ಶ್ರೀರಾಮಕೃಷ್ಣರು ಹೇಗೆ ಅವರನ್ನು ಪಾರು ಮಾಡಿದರು! ಶುಕದೇವನಂತೆ ಪವಿತ್ರರಾಗಿದ್ದರು ಯೋಗಾನಂದರು!

ಸಂಗ್ರಹ :ಸ್ವರ್ಣಗೌರಿ